ಯಲ್ಲಿ ಎಷ್ಟು ದೇವದಾಸಿ ಫಲಾನುಭವಿಗಳನ್ನು ಆರಿಸಿದ್ದೀರಿ? ಈ ಟ್ರೈಸಂ ಯೋಜನೆ ಯಾವ ಇಲಾಖೆಯಿಂದ ನೇರವಾಗಿ ನಡೆಯುತ್ತದೆ? ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ ? ರಾಜ್ಯ ಸರ್ಕಾರ ಎಷ್ಟು ಹಣ ಒದಗಿಸಿದೆ? ಮತ್ತು ದೇವದಾಸಿಯರಿಗಾಗಿ ತಾವು ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ. ವೈ. ಘೋರ್ಪಡೆ : ಇದರ ಬಗ್ಗೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿಕೊಡಲಾಗುವುದು.

ವಿಷಯ : ಬೀದರ್ ಜಿಲ್ಲೆಯಲ್ಲಿ ಐ.ಆರ್.ಡಿ.ಪಿ ಯೋಜನೆ.

1241

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಗ್ರಾಮಾಣಾಭವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಐ.ಆರ್.ಡಿ.ಪಿ ಯೋಜನೆ ಅನ್ವಯ ಬೀದರ್ ಜಿಲ್ಲೆಯಲ್ಲಿ 1990-91, 1991-92 ಮತ್ತು 1992-93ನೇ ಸಾಲಿನ ಒಟ್ಟು ವೆಚ್ಚ?
ಆ) ತಾಲ್ಲೂಕುವಾರು ಫಲಾನುಭವಿಗಳ ಸಂಖ್ಯೆಯನ್ನು ಒದಗಿಸುವುದು;
ಇ) ಬಡತನ ರೇಖೆ ಮೀರಿ ಆರ್ಥಿಕ ಮಟ್ಟ ಸುಧಾರಣೆಯಾಗಿದೆಯೆ?
ಈ) ಹಣ ದುರುಪಯೋಗವನ್ನು ತಪ್ಪಿಸಲು ಉಸ್ತುವಾರಿ ಏಜನ್ಸಿ ಯಾವುದಾದರೂ ಇದೆಯೆ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಣಾಭವೃದ್ಧಿ ಮತ್ತು ಪಂ.ರಾಜ್ಯ ಸಚಿವರು)

ಅ) ಸಾಲುವಾರು ವೆಚ್ಚದ ವಿವರ ಈ ಕೆಳಕಂಡಂತಿವೆ ;
1990-91 ರೂ. 96.987 ಲಕ್ಷ ರೂ.
1991-92 ರೂ. 92.990 ಲಕ್ಷ ರೂ.
1992-93 ರೂ. 47.431 ಲಕ್ಷ ರೂ.
(31-1-93ರಲ್ಲಿದ್ದಂತೆ)

ಆ) ತಾಲ್ಲೂಕುವಾರು ಫಲಾನುಭವಿಗಳ ವಿವರ ಕೆಳಕಂಡಂತಿದೆ.

		1990-91		1991-92		1992-93	
		ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
1)	ಔರದ್	680	563	644	691	536	364
2)	ಬಸವಕಲ್ಯಾಣ	637	639	603	658	503	454
3)	ಬಾಲ್ಕಿ	637	648	603	497	503	205
4)	ಬೀದರ್	637	701	603	701	503	337
5)	ಹುಮ್ನಾಬಾದ್	552	437	526	709	436	191
	ಒಟ್ಟು	3143	3038	2979	3256	2481	1552

ಇ) ಆಗಿದೆ

ಈ) ಇದೆ.

ಫಲಾನುಭವಿಗಳ ಸ್ವತ್ತುಗಳ ತಪಾಸಣೆಯನ್ನು ಮೇಲ್ವಿಚಾರಣಾ ಅಧಿಕಾರಿಗಳು ಕೈಗೊಳ್ಳುತ್ತಾ ಇದ್ದಾರೆ. ಏಜನ್ಸಿ ಯಾವುದೆಂದರೆ ;

1. ಬ್ಲಾಕ್ ಮಟ್ಟದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿ ಅಧಿಕಾರಿಗಳು.
2. ಜಿಲ್ಲಾ ಪರಿಷತ್‌ನ ಅಧಿಕಾರಿಗಳು
3. ಬ್ಯಾಂಕ್‌ಗಳು.

ಶ್ರೀ ನಾರಾಯಣರಾವ್ ಮನಹಳ್ಳಿ : ಮಾನ್ಯ ಅಧ್ಯಕ್ಷರೆ, ಐ.ಆರ್.ಡಿ.ಪಿ. ಕಾರ್ಯಕ್ರಮದ ಅನುಷ್ಠಾನದಿಂದ ಬಹಳಷ್ಟು ಬಡ ಜನರಿಗೆ ಲಾಭವಾಗಿದೆಯೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ಕಳೆದ ನಾಲ್ಕು ವರ್ಷಗಳ ಸರ್ಕಾರದ ಗುರಿ ನೋಡಿದರೆ, ಆ ಗುರಿ ಸಾಧನೆ ಮಾಡುವುದಕ್ಕೆ ಸರ್ಕಾರದಿಂದ ಆಗಿಲ್ಲ, ಬರಿ ಶೇಕಡ 50ರಷ್ಟು ಗುರಿ ಸಾಧಿಸಿದ್ದಾರೆ . ಅನಂತರ, ಐ.ಆರ್.ಡಿ.ಪಿ.ಯ ಫಲಾನುಭವಿಗಳೇನಿದ್ದಾರೆ, ಇವರುಗಳಲ್ಲಿ ಬಹುತೇಕ ಜನರು ಹಸು, ಎತ್ತಿನ ಬಂಡಿಗಳನ್ನು ಕೊಳ್ಳುವ ಸಲುವಾಗಿ ಸಾಲ ಪಡೆದಿದ್ದು, ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ಮಾಡಿದಾಗ ಸಾಲ ಪಡೆದವರು ಬೇರೆಯವರ ಹಸು, ಎತ್ತಿನ ಬಂಡಿಗಳನ್ನು ತೋರಿಸಿ ಸಾಲವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಪ್ರವೃತ್ತಿ ಹಳ್ಳಿಗಳಲ್ಲಿ ನಡೆಯುತ್ತಿದೆ ಮತ್ತು ಹಣ ದುರುಪಯೋಗವನ್ನು ತಪ್ಪಿಸಲು ಯಾವುದಾದರೂ ಉಸ್ತುವಾರಿ ಏಜೆನ್ಸಿ ಇದೆಯೇ? ಎಂದು ಕೇಳಿದ್ದಕ್ಕೆ ಉತ್ತರವಾಗಿ ಫಲಾನುಭವಿಗಳ ಸ್ವತ್ತನ್ನು ತಪಾಸಣೆ ಮಾಡುವುದಕ್ಕೆ ಬ್ಲಾಕ್ ಮಟ್ಟದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಪರಿಷತ್ ಅಧಿಕಾರಿಗಳು ಹಾಗೂ ಬ್ಯಾಂಕ್‌ಗಳು ಎಂದು ಹೇಳಿದ್ದಾರೆ. ನನ್ನ ಗಮನಕ್ಕೆ ಬಂದಿರುವಂತೆ ಇಲ್ಲಿಯವರೆಗೆ ಯಾವುದೇ ರೀತಿ ನಿಯಂತ್ರಣ ಮಾಡಿ ಸಾಲವನ್ನು ಸರಿಯಾಗಿ ಸದುಪಯೋಗ ಮಾಡಿಕೊಳ್ಳುವಂತೆ ಕ್ರಮ ಕೈಗೊಂಡಿಲ್ಲವೆನ್ನುವುದು ನನ್ನ ಭಾವನೆ. ಆದುದರಿಂದ, ಸರ್ಕಾರ ಇದರ ಕಡೆಗೆ ವಿಶೇಷ ಗಮನ ಹರಿಸುತ್ತದೆಯೆ? ಇಲ್ಲವೆ? ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ , ನಮ್ಮ ರಾಜ್ಯದಲ್ಲಿ ಐ.ಆರ್.ಡಿ.ಪಿ ಯೋಜನೆ ಪ್ರಾರಂಭವಾದಂದಿನಿಂದ ಇವೊತ್ತಿನವರೆಗೂ ಯೋಜನೆಯಡಿ 2 ಕೋಟಿ 17 ಲಕ್ಷ ರೂಪಾಯಿಗಳ ಸಬ್ಸಿಡಿ ಕೊಡಲಾಗಿದೆ, ಮತ್ತು ಲೋನ್ 5 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಅಂದರೆ, ಒಟ್ಟು 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆಯ ಉದ್ದೇಶ ಬಡ ಜನರನ್ನು ಬಡತನ ರೇಖೆಯಿಂದ ಮೇಲಕ್ಕೆತ್ತುವಂಥಾದ್ದು. ಈ ಯೋಜನೆ ಈಗ ನೂರಕ್ಕೆ ನೂರರಷ್ಟು ಯಶಸ್ವಿಯಾಗಿದೆಯೆಂದು ಯಾರೂ ಸಹ ಹೇಳುತ್ತಿಲ್ಲ, ಅಲ್ಲದೆ, ಈ ಕುರಿತು ಕೇಂದ್ರ ಸರ್ಕಾರದವರು ಕೂಡ ಸಾಕಷ್ಟು ಇವ್ಯಾಲ್ಯುಯೇಷನ್ ಮಾಡುತ್ತಾ ಬಂದಿದ್ದಾರೆ. ನಾವು (ರಾಜ್ಯ ಸರ್ಕಾರ) ಕೂಡ ಮಾಡುತ್ತಾ ಬಂದಿದ್ದೇವೆ. ಈ ಯೋಜನೆಯಡಿ ಎಲ್ಲರನ್ನೂ ಬಡತನದ ರೇಖೆಯಿಂದ ಮೇಲಕ್ಕೆತ್ತಲು ಸಾಧ್ಯವಾಗಿಲ್ಲ, ಕೆಲವರನ್ನು ಅವರ ಆರ್ಥಿಕ ಮಟ್ಟದಿಂದ ಮೇಲಕ್ಕೆತ್ತಲು ಸಾಧ್ಯವಾಗಿದೆ. ಈಗ ಅವರ ಆದಾಯ ಎಷ್ಟು ಜಾಸ್ತಿಯಾಗಿದೆಯೆಂಬುದನ್ನು ನಾವು ನೋಡುವ ಪ್ರಯತ್ನ ಮಾಡಿದ್ದೇವೆ, ಈ ಹಿನ್ನೆಲೆಯಲ್ಲಿ ಎಲ್ಲರ ಆದಾಯವೂ ಜಾಸ್ತಿಯಾಗಿದೆಯೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಯೋಜನೆಯಡಿ ನೂರಕ್ಕೆ ನೂರರಷ್ಟು ಜನರು ತಮ್ಮ ಬಡತನ ರೇಖೆಯಿಂದ ಇನ್ನೂ ಮೇಲೆ ಬಂದಿಲ್ಲ . ಹೀಗಿದ್ದರೂ ಕೂಡ ಅವರಿಗೆ ಸಾಕಷ್ಟು ಲೋನ್, ಅಸೆಟ್ಸ್ ಕೊಡುತ್ತಿದ್ದಾರೆಯೆ? ಇಲ್ಲವೆ? ಎಂಬ ಬಗ್ಗೆಯೂ ಕೂಡ ಮಾಹಿತಿ ಸಂಗ್ರಹಿಸುವ ಪ್ರಯತ್ನ ಮಾಡಿದ್ದೇವೆ. ಇದಕ್ಕಾಗಿ ಸಾಕಷ್ಟು ಲೋನ್ ಕೊಡುತ್ತಿದ್ದೇವೆ. ಆದರೆ ಈ

ಫ್ಯಾಮಿಲಿ ಇನ್‌ವೆಸ್ಟ್‌ಮೆಂಟನ್ನು ಯಾವ ಯಾವ ಕೆಲಸಗಳಿಗೆ ಸರಾಸರಿ ಎಷ್ಟು ಕೊಟ್ಟಿದ್ದೇವೆಂದು ಇದರಲ್ಲಿ ಇವ್ಯಾಲ್ಯುಯೇಷನ್ ಕೂಡ ಮಾಡಿದ್ದಾರೆ. ನಿಮಗೆ ಹೇಳಬೇಕೆಂದರೆ ನೀರಾವರಿ ಸ್ಕೀಮ್‌ಗಾಗಿ, per capita investment ಪರ್ ಫ್ಯಾಮಿಲಿಗೆ 7574 ಆಗಿದೆ, poultry schemeಗೆ 6753, ಎತ್ತಿನ ಬಂಡಿಗೆ 5764, ಅಂಗಡಿಗೆ 4574, ವೈರಿಗೆ 4175, ಹ್ಯಾಂಡ್‌ಲೂಮ್‌ಗೆ 4043, ಹ್ಯಾಂಡಿಕ್ರಾಫ್ಟ್‌ಗೆ 3588 ಮತ್ತು ಟೈಲರಿಂಗ್‌ಗೆ 3260, ಹೀಗೆ ಮೂರು ಸಾವಿರ, ನಾಲ್ಕು ಸಾವಿರ, ಐದು ಸಾವಿರವೆಂದು ಬೇರೆ ಬೇರೆ ಕೆಲಸಗಳಿಗೆ ಕೊಟ್ಟಿದ್ದೇವೆ. ಆದರೆ ಈಗ ಬೆಲೆ ಜಾಸ್ತಿಯಾಗಿರುವುದರಿಂದ ಈ 5 ಸಾವಿರ, 6 ಸಾವಿರ ಇನ್‌ವೆಸ್ಟ್‌ಮೆಂಟ್ ಏನು ಇದೆ ಅದನ್ನು 12 ಸಾವಿರಕ್ಕಾದರೂ ಜಾಸ್ತಿ ಮಾಡಬೇಕೆಂದು ನಮಗೆ ಅಭಿಪ್ರಾಯವಿದೆ. ಈ ವಿಚಾರವನ್ನು ನಾವು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತಿದ್ದೇವೆ. ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಫ್ಯಾಮಿಲಿ ಇನ್‌ವೆಸ್ಟ್‌ಮೆಂಟ್ ಏನು ಇದೆ. ಅದು ಜಾಸ್ತಿಯಾಗುತ್ತದೆಂದು ನಾವು ನಂಬಿಕೊಂಡಿದ್ದೇವೆ ಮತ್ತು ಈ field visits, assets verification ಕೆಲಸ ನಡೆಯುತ್ತಿದೆ. ಒಟ್ಟಿನಲ್ಲಿ ಬಡವರಿಗೆ ಅನುಕೂಲವನ್ನು ಮಾಡಿಕೊಡುವ ರೀತಿಯಲ್ಲಿ ಈ ಕಾರ್ಯಕ್ರಮವನ್ನು ಮಾಡಬೇಕು. ಮುಂದುವರೆಸಿಕೊಂಡು ಹೋಗಬೇಕು. ಇದರಲ್ಲಿ ದೋಷವಿಲ್ಲವೆಂದು ನಾನು ಹೇಳುತ್ತಿಲ್ಲ, ಇದರಲ್ಲಿ ನೂರಕ್ಕೆ ನೂರು ಪಾಲು ಯಶಸ್ವಿಯಾಗಿದೆ ಎಂದು ನಾನು ಹೇಳುತ್ತಿಲ್ಲ. ಆದರೆ ಈ ಕಾರ್ಯಕ್ರಮದ ಹಿನ್ನೆಲೆಯಲ್ಲಿರತಕ್ಕ ವಿಚಾರ ಬಹಳ ಮೂಲಭೂತವಾದಂಥದ್ದು, ಇದರ ಗುಣಮಟ್ಟವನ್ನು ಆದಷ್ಟು ಮಟ್ಟಿಗೆ ಹೆಚ್ಚಿಸುತ್ತಾ ಹೋಗುತ್ತೇವೆ.

ಶ್ರೀ ನಾರಾಯಣರಾವ್ ಮನಹಳ್ಳಿ : ಮಾನ್ಯ ಅಧ್ಯಕ್ಷರೇ, ಇದರ ಗುರಿಯನ್ನು ನೀವು ರೀಚ್ ಮಾಡಿಲ್ಲ. ನಮ್ಮ ಬೀದರ್ ಜಿಲ್ಲೆಯ ಏನು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೀರಿ ಅದರಲ್ಲಿ 50 ಪರ್‌ಸೆಂಟ್ ಗುರಿಯನ್ನು ಮುಟ್ಟಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ, ಪೂರಾ ಗುರಿಯನ್ನು ಮುಟ್ಟಲು ಆಗಿಲ್ಲ. ಕಾರಣವೇನೆಂದರೆ ಅನೇಕ ಬ್ಯಾಂಕುಗಳು ಈ ಕಾರ್ಯಕ್ರಮವನ್ನು ಸರಿಯಾಗಿ ಅನುಷ್ಠಾನಕ್ಕೆ ತರಬಾರದು ಎನ್ನತಕ್ಕ ಉದ್ದೇಶ ಹೊಂದಿವೆ. ಇದು ನನ್ನ ನೇರವಾದ ಆಪಾದನೆ. ಇದಕ್ಕೆ ಮಾನ್ಯ ಸಚಿವರು ಏನು ಹೇಳುತ್ತಾರೆ.

ಶ್ರೀ ಎಂ. ವೈ ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಔರಾದ್ ತಾಲ್ಲೂಕಿಗೆ ಸಂಬಂಧಪಟ್ಟಂತೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇವೆ. ಬ್ಯಾಂಕಿನವರು ಒಟ್ಟಾರೆಯಾಗಿ ಎಷ್ಟು ಸಾಲವನ್ನು ನೀಡಿದ್ದಾರೆಂದು ಹೇಳಿದ್ದೇವೆ. ರಾಜ್ಯದ ಮಟ್ಟಿಗೆ ಸಬ್ಸಡಿ 2 ಕೋಟಿ ಆದರೆ ಬ್ಯಾಂಕಿನವರು 5 ಕೋಟಿಯನ್ನು ಈ ಕಾರ್ಯಕ್ರಮಕ್ಕೆ ಉಪಯೋಗಿಸಿದ್ದಾರೆ.

ವಿಷಯ : ಚಿತ್ರದುರ್ಗ ಜಿಲ್ಲಾ ಪರಿಷತ್ತಿನ ಕಾನೂನು ಸಲಹೆಗಾರರಿಗೆ ಗೌರವಧನ.

19

ಶ್ರೀ ಎ. ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲಾ ಪರಿಷತ್ತಿನ ಕಾನೂನು ಸಲಹೆಗಾರರಿಗೆ ನಿಗದಿಪಡಿಸಿರುವುದಕ್ಕಿಂತ ಅಂದರೆ ಮಾಹೆಯಾನ 300-00 ರೂ. ಬದಲಾಗಿ ಮಾಹೆಯಾನ 3,000-00 ನಂತೆ ಗೌರವ ಧನ ಪಾವತಿ ಮಾಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಅದು ಸರಿಯಲ್ಲವೆಂದೂ ಹೆಚ್ಚುವರಿ ಪಾವತಿ ಮಾಡಿರುವ ಗೌರವಧನವನ್ನು ಸದರಿಯವರಿಂದ ವಾಪಸ್ಸು ಪಡೆಯಬೇಕೆಂದು ಸರ್ಕಾರದಿಂದ ಆದೇಶ ಬಂದಿದ್ದರೂ